ಪ್ರಜಾ ವಾಹಿನಿ
ಜನ ದನಿ

# Tuesday 31st January 2023, Page No.03

## VTU-Training and Placement officers one day conference organized in association with VTU at RVCE campus

ಪ್ರಜಾ ವಾಹಿನಿ
ಜನ ದನಿ

# 'ಸಾಮಾನ್ಯ ವಿದ್ಯಾರ್ಥಿಗಳನ್ನು ಅಸಾಮಾನ್ಯರನ್ನಾಗಿಸಬೇಕಿದೆ'




● ಪ್ರಜಾವಾಹಿನಿ–ಯಶವಂತಪುರ

ಹತ್ತನೇ ತರಗತಿ ತೇರ್ಗಡೆಯಾದರೆ ಹಿಂದಿನ ಕಾಲದಲ್ಲಿ ದೇಶಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿತ್ತು, ಇಂದು ಪದವಿ ಪೂರ್ಣಗಳಿಸಿದ ವಿದ್ಯಾರ್ಥಿಗೆ ಸಂಸ್ಥೆಯೊಂದು ನೀಡುವ ಸಂಭಾವನೆ ಬಗ್ಗೆ ಚರ್ಚಿಸುವಷ್ಟು ಕಾಲ ಬದಲಾಗಿದೆ ಎಂದು ಟೊಯೋಟಾ ಕಂಪನಿಯ ಟಿ.ಆರ್.ಪರಶುರಾಮನ್ ಅಭಿಪ್ರಾಯ ವ್ಯಕ್ತಪಡಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ರಸ್ತೆಯ ಆರ್.ವಿ ಕಾಲೇಜ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ವಿಟಿಯು ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಟಿಯು–ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಆಫಿಸರ್ಸ್ ಒಂದು ದಿನದ ಸಮಾವೇಶದಲ್ಲಿ ಮಾತನಾಡಿದ ಅವರು, ಸಾಮಾನ್ಯ ವಿದ್ಯಾರ್ಥಿಗಳನ್ನು ಅಸಾಮಾನ್ಯರನ್ನಾಗಿ ಪರಿವರ್ತನೆ ಮಾಡುವುದರ ಬಗ್ಗೆ ನಾವು ಪ್ರಮುಖವಾಗಿ ಗಮನಿಸಬೇಕಿದೆ, ಜಪಾನ್ ದೇಶಕ್ಕೆ ಹೋಲಿಸಿದರೆ ನಮ್ಮ ದೇಶದಲ್ಲಿ ಏಕರೂಪತೆಯ ಕೊರತೆಯಿದೆ, ನಮ್ಮ ದೇಶದಲ್ಲಿ ಉನ್ನತ ಮಟ್ಟದ ಜೀವನ ನಡೆಸುವರು ಹೆಚ್ಚಿದ್ದಾರೆ, ಅದರಂತೆಯೇ ಒಪ್ಪತ್ತಿನ ಊಟಕ್ಕೂ ಪರದಾಡುವ ವರ್ಗದವರೂ ಇದ್ದಾರೆ, ಯುವ ಜನಸಂಖ್ಯೆ ಅತೀ ಹೆಚ್ಚು ಹೊಂದಿರುವ ರಾಷ್ಟ್ರ ನಮ್ಮದು, ಈ ಅವಕಾಶ ನಾವು ಶಕ್ತಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳಬೇಕಿದೆ ಎಂದರು.

ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿಟಿಯು ಕುಲಪತಿ ಪ್ರೊಫೆಸರ್ ಎಸ್.ವಿದ್ಯಾಶಂಕರ್ ಮಾತನಾಡಿ, ಕಾರ್ಯಾಗಾರ ನಡೆಸಲು ವಿಟಿಯು ಜೊತೆ ಒಡಂಬಡಿಕೆ ಹೊಂದಿರುವ ಶಿಕ್ಷಣ ಸಂಸ್ಥೆಗಳ ಸಹಯೋಗ ಬಯಸುತ್ತೇವೆ, ಮುಂದಿನ ದಿನಗಳಲ್ಲಿ ಉದ್ಯಮಗಳು ಮತ್ತು ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಪಠ್ಯಕ್ರಮದಲ್ಲಿ ಪೂರಕವಾದ ಬದಲಾವಣೆ ತರುವ ಉದ್ದೇಶ ಹೊಂದಲಾಗಿದ್ದು, ಒಂದು ವಲಯದಲ್ಲಿ ವಿದ್ಯಾರ್ಥಿಗಳ ಕಡಿಮೆ ಸಂಖ್ಯೆ ದಾಖಲಾತಿಯಿದೆ ಎಂದು ಅದನ್ನು ಕೈಬಿಡಬಾರದು, ಪರಿಣತಿ ಹೊಂದಿರುವ ಪಠ್ಯಕ್ರಮದ ಜೊತೆ ಶಿಕ್ಷಕರು ಬೇರೆ ಯಾವುದಾದರೂ ಒಂದು ವಿಷಯದಲ್ಲಿ ತರಬೇತಿ ಪಡೆದರೆ ಕೌಶಲ್ಯಾವೃದ್ಧಿ ಜೊತೆ ವಿದ್ಯಾರ್ಥಿಗಳು ಬಯಸುವ ಐಚ್ಛಿಕ ವಿಷಯ ಬೋಧಿಸಲು ಸುಲಭವಾಗಲಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆ ತರಲಿದೆ ಎಂದು ಹೇಳಿದರು.

ಸಮಾವೇಶದಲ್ಲಿ, ಆರ್.ವಿ.ಸಿ.ಇ ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಜಂಟಿ ಕಾರ್ಯದರ್ಶಿ ಡಿ.ಪಿ.ನಾಗರಾಜ್, ಡಾ.ಕೆ.ಎಸ್.ಗೀತಾ, ವಿದ್ಯಾರ್ಥಿಗಳು, ಶಿಕ್ಷಕರು, ಇತರರಿದ್ದರು. ರಾಜ್ಯದ ಹಲವು ಜಿಲ್ಲೆಯಿಂದ ವಿವಿಧ ಕಾಲೇಜುಗಳ 150ಕ್ಕೂ ಹೆಚ್ಚು ಪ್ಲೇಸ್ಮೆಂಟ್ ಆಫೀಸರ್ಸ್‌ಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಅಸಾಧಾರಣ ಸಾಧನೆಗೈದು ಖಾಸಗಿ ಸಂಸ್ಥೆಯಲ್ಲಿ 90 ಲಕ್ಷ ರೂ. ವಾರ್ಷಿಕ ಸಂಭಾವನೆ ಪಡೆದ ಆರ್.ವಿ.ಸಿ.ಇ ವಿದ್ಯಾರ್ಥಿ ರಕ್ಷಿತ್ ದತ್ತಾತ್ರೇಯ ಹೆಗಡೆ, ನಂತರದ ಸಾಲಿನಲ್ಲಿ ವಾರ್ಷಿಕ 65 ಲಕ್ಷ ರೂ. ಸಂಭಾವನೆ ಪಡೆದ ವಿದ್ಯಾರ್ಥಿಗಳಾದ ತರುಣ್ ಶ್ರೀವಾಸ್ತವ್, ವೀರಭದ್ರ, ವೈಭವ್ ಪೋರ್ವಾಲ್ ಅವರುಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು.